**OS 27-2020**
**PW-3**

ದಿನಾಂಕ:02.03.2026 ರಂದು ಸಾಕ್ಷಿಯನ್ನು ಕರೆಸಿ ವಿಧಿಬದ್ಧವಾದ ಪ್ರಮಾಣವಚನ ಭೋಧಿಸಲಾಯಿತು.

<u>ಪಾಟೀ ಸವಾಲು : **1** ರಿಂದ **5 , 7, 8, 15** ರಿಂದ **17** ಮತ್ತು **19**ನೇ ವಾದಿ ಪರ ಶ್ರೀ ಎಂ ಆರ್ ವಕೀಲರಿಂದಃ</u>

ನಾನು ಎಂ ಎ ಪದವಿಧರ . ಈಗ ಖಾಸಗಿ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದೇನೆ**. PW-2** ರ ವಿಚಾರವನುನ ಕೇಳಿಸಿಕೊಂಡಿರರುವುದಿಲ್ಲ**.** ಆದರೆ ಬಾಗಿಲ ಹತ್ತಿರ ನಿಂತಿದ್ದೆ**.** ವಾದಿ ನಮ್ಮ ಊರಿನವರು**.** ವಾದಿಯು **Counslier** ಆಗಿದ್ದರು ಅಲ್ಲದೆ **Real estate** ಮತ್ತು ವ್ಯವಸಾಯ ಮಾಡುತ್ತಾರೆ**.** ವಾದಿ ಕ್ರಯ ಕರಾರನ್ನು ಬರೆಸಿಕೊಂಡು ಬೆಲೆ ಜಾಸ್ತಿ ಆದ ನಂತರ ಈ ರೀತಿ ದಾವೆ ದಾಖಲೆ ಮಾಡುತ್ತಾರೆ ಎಂದರೇ ಇಲ್ಲ**.** ಇದೇ ನ್ಯಾಯಾಲಯದಲ್ಲಿ ಇದೇ ತರಹ **2-3** ದಾವೆಗಳನ್ನು ದಾಖಲಿಸಿದ್ದಾರೆ ಎಂದರೇ ಗೊತ್ತಿಲ್ಲ**.**

**2.** ವ್ಯವಹಾರ ಲಕ್ಷಮ್ಮ ರವರ ಮನೆಯಲ್ಲಿ ನಡೆದಿರುತ್ತದೆ**.** ಆಗ ಸಮಯ 12.30 ರಿಂದ ಮೇಲೆ 03.00 ಗಂಟೆವರೆಗೆ ನಡೆದಿರುತ್ತದೆ. ವ್ಯಾಹಾರ ಆಗುವಾಗ ರುದ್ರಮ್ಮರವನ್ನು ನೋಡಿದ್ದೆ. ಆಗ ರುದ್ರಮ್ಮ ರವರಿಗೆ ಎಷ್ಟು ವಯಸ್ಸಾಗಿತ್ತು ಎಂದರೇ ನಿಖರವಾಗಿ ಗೊತ್ತಿಲ್ಲ 70 ಮೇಲೆ ಆಗಿತ್ತು. ಪತ್ರ ಬರೆಯಲು ಪೇಪರ್ ನ್ನು ಯಾರು ತಂದರು ಗೊತ್ತಿಲ್ಲ. ಒಟ್ಟಿನಲ್ಲಿ ಪ್ರತಿವಾದಿ ಮನೆಯವರು ತಂದಿರುತ್ತಾರೆ. ನಿಪಿ-1 ನ್ನು ರವಿಶಂಕರ್ ರವರು ಬರೆದಿದ್ದು ನನ್ನ ಮುಂದೆ ಬರೆದಿರುವುದಿಲ್ಲ. ನಿಪಿ-1ಕ್ಕೆ ಲಕ್ಷ್ಮಮ್ಮ ರವರ ಮನೆಯಲ್ಲಿ ಸಹಿ ಪಡೆದುಕೊಂಡಿರುತ್ತಾರೆ. ಆ ಸಮಯದಲ್ಲಿ 20 ಜನ ಪತ್ರ ಬರೆದುಕೊಟ್ಟಿರುತ್ತಾರೆ. ಆ ಪತ್ರದಲ್ಲಿರುವ ಸಹಿಗಳು ಮತ್ತು ಹೆಬ್ಬಿಟ್ಟಿನ ಗುರುತನ್ನು ಸ್ವಲ್ಪ ಗುರುತಿಸಬಹುದು. ಸಾಕ್ಷಿಗೆ ನಿಪಿ-1 ನ್ನು ತೋರಿಸಿ ಗೀತಾ ರವರ ಸಹಿ ಮತ್ತು ಹೆಬ್ಬಿಟ್ಟಿನ ಗುರುತನ್ನು ತೋರಿಸಿ ಎಂದು ಕೇಳಲಾಗಿ ಸಾಕ್ಷಿ ಆಗುವುದಿಲ್ಲ ಎಂದು ಉತ್ತರಿಸಿರುತ್ತಾರೆ. ನಿಪಿ-1 ರಲ್ಲಿ 23 ಜನ ಹೆಸರುಗಳು ಇದೇ ಎಂದರೇ ಸಾಕ್ಷಿ ಲೆಕ್ಕ ಹಾಕಿ ಹೌದು ಎಂದು ಉತ್ತರಿಸಿರುತ್ತಾರೆ. ಸಹಿಗಳು 20

ಜನಗಳದ್ದು ಇದೆ ಎಂದರೇ ಹೌದು. ಉಳಿದ 3 ಜನ ಸಹಿ ಯಾರಾದು ಎಂದರೇ ಸಾಕ್ಷಿ ನಿಪಿ-1 ನ್ನು ನೋಡಿ 2ನೇ ಮತ್ತು 19ನೇ ಪ್ರತಿವಾದಿ ಮತ್ತು ಗೀತಾ ರವರು ಸಹಿ ಇರುವುದಿಲ್ಲ.

3. ಮುಂಗಡವಾಗಿ ವಾದಿಯು 7 ಲಕ್ಷ ಚೆಕ್ ನ್ನು 46 ಲಕ್ಷ ನಗದು ಹಣವನ್ನು ಕೊಟ್ಟಿರುತ್ತಾರೆ. ನಗದು ಹಣವನ್ನು ರುದ್ರಮ್ಮ ರವರ ಕೈಗೆ ಕೊಟ್ಟಿರುತ್ತಾರೆ. ನನ್ನ ಪ್ರಮಾಣ ಪತ್ರದಲ್ಲಿ ತಿಳಿಸಿರುವರ ಸಿವಿಲ್ ದಾವೆ ಸಂಖ್ಯೆ ನನಗೆ ಗೊತ್ತಿಲ್ಲ. ಅದು ಮುಕ್ತಾಯ ಆಗಿರುವುದು ನನಗೆ ಗೊತ್ತಿಲ್ಲ. ಯಾವುದೇ ದಾವೆ ಇಲ್ಲದೇ ಇದ್ದರು ಸುಳ್ಳು ಹೇಳಿದ್ದೇನೆ ಎಂದರೆ ಸರಿಯಲ್ಲ. ಸುನೀಲ್ ಕುಮಾರ್ ರವರ ತಂಗಿ ಶೃತಿಯನ್ನು ವಾದಿಗೆ ಮದುವೆ ಮಾಡಿ ಕೊಟ್ಟಿದ್ದಾರೆ ಎಂದರೇ ಹೌದು. ಸುನೀಲ್ ಕುಮಾರ್ ರವರು ವಾದಿ ಹೆಂಡತಿಯ ಅಣ್ಣ ಎಂದರೇ ಹೌದು.  ಸರ್ವೆ ನಂ 224/2 ಕ್ಕೆ ಸಂಬಂದ ಪಟ್ಟಂತೆ ಯಾರು ಯಾರು 11 ಗುಂಟೆ ಸ್ವತ್ತನ್ನು ಸುನೀಲ್ ಕುಮಾರ್ ರವರಿಗೆ ಕ್ರಯ ಮಾಡಿಕೊಟ್ಟಿದ್ದಾರೆ ಎಂದರೇ ಲಕ್ಷ್ಮಮ್ಮ , ಶ್ರೀನಿವಾಸ ಉಳಿದವರ ಹೆಸರು ಗೊತ್ತಿಲ್ಲ.  ಆ ಕ್ರಯ ಪತ್ರಕ್ಕೆ ಸಾಕ್ಷಿಯಾಗಿ ಹೆಸರು ಬರೆದಿದ್ದಾರೆ ಸಹಿ ಮಾಡಿರುವುದಿಲ್ಲ.  ನನ್ನ ಮುಖ್ಯ ವಿಚಾರಣೆ ಹಾಗೂ ದಿ 06.02.2019 ರ ಆನ್ ಲೈನ್ ದೃಢೀಕೃತ ಪ್ರತಿಯನ್ನು ತೋರಿಸಿ ಎರಡು ಸಹಿಗಳು ನನ್ನದೇ ಎಂದು ಒಪ್ಪಿದ ಮೇರೆಗೆ ದಿ 06.02.2019ರ ಕ್ರಯ ಪತ್ರದ ದೃಢೀಕೃತ ಪ್ರತಿಯನ್ನು ನಿಡಿ-1 ಎಂದು ಗುರುತಿಸಲಾಯಿತು.

4. ನಿಪಿ-4 ನ್ನು ನಿಡಿ-1 ನ್ನು ಬರೆದುಕೊಟ್ಟವರ ಹೆಸರಿನಲ್ಲಿ ಇರುತ್ತದೆ. 11 ಗುಂಟೆ ಅಲ್ಲದೆ ಬೇರೆ ಯಾವ ಯಾವ ಸರ್ವೆ ನಂಬರ್ ಗಳಲ್ಲಿ ಎಷ್ಟು ಬರೆದುಕೊಟ್ಟಿದ್ದಾರೆ ಎಂದರೇ ಸರ್ವೆ ನಂಬರ್ ಗೊತ್ತು. ವಿಸ್ತೀರ್ಣ ಗೊತ್ತಿಲ್ಲ. ಸರ್ವೆ ನಂ 224/2, 224/3, 224/4, 227/2, 227/3, 228/1, 228/2 ಆಗಿರುತ್ತದೆ. ನಾನು ಮೇಲೆ ಹೇಳಿದ ಸರ್ವೆ ನಂಬರುಗಳು ಬರೆದುಕೊಟ್ಟ ಹೆಸರಿನಲ್ಲಿ ಪಹಣಿ ಇದೆ ಎಂದರೇ ಹೌದು. ಉಳಿಕೆ ಹಣಕ್ಕೆ ನಿಡಿ-1ನ್ನು ಸುನೀಲ್ ಕುಮಾರ್ ರವರ

ಹೆಸರಿಗೆ ಬರೆದುಕೊಟ್ಟಿದ್ದಾರ ಎಂದರೇ ಇಲ್ಲ. ಬರೆಸಿಕೊಂಡವರ ಮೇಲೆ ವಾದಿ ದಾವೆ ದಾಖಲು ಮಾಡಿದ್ದಾರ ಎಂದರೇ ಇಲ್ಲ. ನಿಪಿ-1ಕ್ಕೆ ನನ್ನ ಮುಂದೆ ಪ್ರತಿವಾದಿಯವರು ಸಹಿ ಮಾಡಿ ಹೆಬ್ಬಿಟ್ಟಿನ ಗುರುತು ಹಾಕಿಲ್ಲ ಎಂದರೇ ಸರಿಯಲ್ಲ. ನಿಪಿ-2 ರ ಪೇಪರ್ ನ್ನು ಸಿದ್ದಯ್ಯ ತಂದಿರುತ್ತಾರೆ. ಯಾವ ದಿನಾಂಕ ತಂದರು ಎಂದರೇ ದಿ 15.04.2019 ರಂದು ತಂದಿದ್ದಾರೆ. ಪತ್ರವು ಅದೇ ದಿನ ತಯಾರಾಗಿದೆ. ಸಹಿ ಪಕ್ಕದಲ್ಲಿ ದಿನಾಂಕ ಹಾಕಿದ್ದೀರ ಎಂದರೇ ಇಲ್ಲ. ನಿಪಿ-2 ನ್ನು ಸಿದ್ದಯ್ಯರವರು ಬರೆಸಿಕೊಂಡು ಬಂದಿರುತ್ತಾರೆ. ತಯಾರು ಆಗುವಾಗ ನಾನು ಇರಲ್ಲಿಲ್ಲ. ಪತ್ರವನ್ನು ಸಿದ್ದಯ್ಯರವರು ಅವರ ಮನೆಗೆ ತಂದಿದ್ದರು. ಆ ಪತ್ರಕ್ಕೆ ಸಿದ್ದಯ್ಯ. ವಿನುತಾ, ನಾಗರಾಜು, ಸತೀಶ, ಸೋಮಶೇಖರ ಮತ್ತು ಜಯಮ್ಮ ಸಹಿ ಮಾಡಿದ್ದಾರೆ. ಆಗ ಸಮಯ ಮಧ್ಯಾಹ್ನ 1 ರಿಂದ 2 ಗಂಟೆ ಆಗಿತ್ತು. ಹಣವನ್ನು ವಾದಿ ಸಿದ್ದಯ್ಯ ಅವರ ಕೈಗೆ ಕೊಟ್ಟಿರುತ್ತಾರೆ. ನಿಪಿ-2 ರಲ್ಲಿ 11 ಗುಂಟೆಗೆ ಸಂಬಂದ ಪಟ್ಟಂತೆ ದಾವೆ ಬಾಕಿ ಎಂದು ಬರೆಸಿದ್ದಾರೆ. ನಿಪಿ-2 ರಲ್ಲಿ ಸರ್ವೆ ನಂಬರ್ ಮತ್ತು ಕೇಸ್ ನಂಬರ್ ನ್ನು ಬರೆದಿರುವುದಿಲ್ಲ. ನಿಪಿ-1 ಸಹಿ ಮಾಡಿದ ಎಲ್ಲಾರು ನಿಪಿ-2 ಕ್ಕೆ ಸಹಿ ಮಾಡಿಲ್ಲ. ನಿಪಿ-2 ನ್ನು ಅದರಲ್ಲಿ ಸಹಿ ಇರುವ ಯಾರು ಬರೆದುಕೊಟ್ಟಿಲ್ಲ ಎಂದರೇ ಸರಿಯಲ್ಲ. ವಾದಿಯು ಉಳಿಕೆ ಹಣವನ್ನು ಪ್ರತಿವಾದಿಯರಿಗೆ ಕೊಡದೆ ಕಾಲಾಹರಣ ಮಾಡಿದ್ದಾರೆ ಎಂದರೇ ಇಲ್ಲ. ಅದನ್ನು ಮುಚ್ಚಲು ನಿಪಿ-2 ಸೃಷ್ಟಿ ಮಾಡಿದ್ದೆ ಎಂದರೇ ಇಲ್ಲ. ವಾದಿ ಸಾಮೀಲಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೇ ಸರಿಯಲ್ಲ.

ಮರುವಿಚಾರಣೆ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಚನ್ನಪಟ್ಟಣ.

**(ಸಾ.ಓ.ಹೇ.ಕೇ.ಸ.ಇ.ಎ.ಒ)**

**(**ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಪಾಟೀ ಸವಾಲಿಗೆ ಕಾಲಾವಕಾಶ ಕೋರಿರುವುದರಿಂದ ಮುಂದೂಡಲಾಯಿತು.**)**

ಯಾವುದೇ ದಾಖಲೆಗಳನ್ನು ಗುರುತಿಸಿಕೊಂಡಿರುವುದಿಲ್ಲ.

**(**ಈ ಹಂತದಲ್ಲಿ ವಾದಿ ಪರ ವಕೀಲರು ಮುಂದುವರಿದ ಮುಖ್ಯ ವಿಚಾರಣೆಗೆ ಕಾಲಾವಕಾಶ ಕೋರಿರುವುದರಿಂದ ಮುಂದೂಡಲಾಯಿತು**)**

**(**ಈ ಹಂತದಲ್ಲಿ ಪ್ರತಿವಾದಿಯ ವಿರುದ್ಧ ಏಕತರ್ಫಿಯ ಆದೇಶ ಮಾಡಿರುವುದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.**)**

**(**ಈ ಹಂತದಲ್ಲಿ ಪ್ರತಿವಾದಿ ಪ್ರತಿವಾದ ಪತ್ರವನ್ನು ಸಲ್ಲಿಸದ ಕಾರಣ ಹಾಗೂ ನ್ಯಾಯಾಲಯದ ಮುಂದೆ ಹಾಜರಾಗದ ಕಾರಣ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು. **)**